**CHAMUNDESHWARI ELECTRICITY SUPPLY CORPORATION LIMITED**
(A Govt. of Karnataka undertaking)

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ರವರ ಕಛೇರಿ
ಕಾರ್ಯ ಮತ್ತು ಪಾಲನಾ ಉಪ ವಿಭಾಗ,
ಸೆಸ್ಕ್, ಆಲೂರು.
*Phone : 08170-218233*

Office of Assistant Executive Engineer
O & M Sub Division , CESC
Alur , Hassan
*Email : aeecescalur@rediffmail.com*

ಸಂಖ್ಯೆ: ಸ.ಕಾಇಂ(ವಿ)/ಶಾಪಾ/ಆಲೂರು/2017-18/ 479-82 ದಿನಾಂಕ: 29-6-17
¢£AAPÀ :

## ಜನಸಂಪರ್ಕ ಸಭೆಯ ನಡವಳಿಗಳು

ದಿನಾಂಕ: 19.06..17 ರ ಶನಿವಾರದಂದು ಮಾನ್ಯ ಸುಚೇತನ್,ಅಧೀಕ್ಷಕ ಇಂಜಿನಿಯರ್ (ವಿ),ಹಾಸನ ರವರ ಅಧ್ಯಕ್ಷತೆಯಲ್ಲಿ ಆಲೂರು ಉಪವಿಭಾಗ ಕಛೇರಿಯಲ್ಲಿ ನಡೆಸಿದ ಜನಸಂಪರ್ಕ ಸಭೆಯ ನಡವಳಿಗಳು:

### ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು

1. ಶ್ರೀ ನಾರಾಯಣ ಬೋವಿ, ಕಾ. ಇಂ (ವಿ), ಸಕಲೇಶಪುರ ವಿಭಾಗ
2. ಶ್ರೀ ಹರೀಶ್,ಲೆಕ್ಕಾಧಿಕಾರಿ,ಸಕಲೇಶಪುರ ವಿಭಾಗ
3. ಶ್ರೀ ತೋಟಪ್ಪ,ಲೆಕ್ಕಾಧಿಕಾರಿ (ಆಂ.ಪ),ಸಕಲೇಶಪುರ ವಿಭಾಗ
4. ಶ್ರೀ ರಂಗೇಗೌಡ ಎಮ್.ಬಿ. ಸ.ಕಾ.ಇಂ.(ವಿ), ಆಲೂರು ಉಪವಿಭಾಗ
5. ಶ್ರೀ .ಮತಿ ಬಿಂದು,ಸಹಾಯಕ ಇಂಜಿನಿಯರ್ (ತಾಂತ್ರಿಕ.), ಆಲೂರು ಉಪವಿಭಾಗ
6. ಶ್ರೀ ಚಂದ್ರಶೇಖರ್.ಎಮ್.ಹೆಚ್.ಕಿರಿಯ ಇಂಜಿನಿಯರ್ (ವಿ), ಆಲೂರು ಶಾಖೆ
7. ಶ್ರೀ ಅಬ್ದುಲ್, ಕಿರಿಯ ಇಂಜಿನಿಯರ್ (ವಿ), ಪಾಳ್ಯ ಶಾಖೆ.
8. ಶ್ರೀ ಮಹೇಶವರಪ್ಪ, ಕಿರಿಯ ಇಂಜಿನಿಯರ್ (ವಿ), ಮಗ್ಗೆ ಶಾಖೆ.
9. ಶ್ರೀ ರಂಗೇಗೌಡ, ಹಿರಿಯ ಸಹಾಯಕರು, ಕಂದಾಯ ಶಾಖೆ,ಆಲೂರು

ಶ್ರೀ ಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ ನೌಕರರುಗಳನ್ನು,ಸ್ವಾಗತಿಸುವ ಮೂಲಕ ಸಭೆಯನ್ನು ಮಧ್ಯಾಹ್ನ 3:00 ಘಂಟೆಗೆ ಪ್ರಾರಂಭ ಮಾಡಿದರು

---

### ಜನಸಂಪರ್ಕ ಸಭೆಯಲ್ಲಿ ದಾಖಲಾದ ದೂರಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ.

1. ಶ್ರೀಮತಿ ಹೇಮಲತಾ ಕೋ/ಂ ಸೋಮಶೇಖರ್ ಮತ್ತು ಕೆಲವು ಮಳುವಳ್ಳಿ ಗ್ರಾಮದ ಗ್ರಾಹಕರು ತಮ್ಮ ಐದು ಮನೆಗಳಿಗೆ ಎಂಟು ವರ್ಷದಿಂದ ವಿದ್ಯುತ್ ಸಂಪರ್ಕ ಇಲ್ಲದಿರುವ ಬಗ್ಗೆ ದೂರು ನೀಡಿದರು.

   ಸಭೆಯ ಅಧ್ಯಕ್ಷರು ಆಲೂರು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ DDUGJY ಯೋಜನೆಯಲ್ಲಿ ಬೇಗನೆ ವಿದ್ಯುತ್ ಸಂಪರ್ಕ ನೀಡಲು ಕ್ರಮವಹಿಸುವಂತೆ ತಿಳಿಸಿದರು.ಹಾಗೂ ತಾತ್ಕಾಲಿಕವಾಗಿ ಉಗ್ರಾಣದಲ್ಲಿ ಲಭ್ಯವಿರುವ ಸೋಲಾರ್ ಲ್ಯಾಂಟರಿನ್ ಗಳನ್ನು ವಿತರಿಸುವಂತೆ ಸೂಚಿಸಿದರು.
2. ಶ್ರೀ ಚಂದ್ರು,ಮುಖ್ಯೋಪಾಧ್ಯರು,ಕಾಮತಿ ಕೊಡಿಗೆ ರವರು ತಮ್ಮ ಶಾಲೆಗೆ ನಿರಂತರ ಜ್ಯೋತಿಯಿಂದ ವಿದ್ಯುತ್ ಸಂಪರ್ಕ ನೀಡುವಂತೆ ಅರ್ಜಿ ನೀಡಿದರು.

   ಸಭೆಯ ಅಧ್ಯಕ್ಷರು ನಿರಂತರ ಜ್ಯೋತಿಯಿಂದ ವಿದ್ಯುತ್ ಸಂಪರ್ಕ ಪಡೆಯಲು ಸ್ವಂತ ಕಾಮಗಾರಿಯಲ್ಲಿ ಕಂಬ ಮತ್ತು ಲೈನ್ ಕೆಲಸಗಳನ್ನು ನಿರ್ವಹಿಸಲು ತಿಳಿಸಿದರು.

3. ಶ್ರೀ ತಾರೇಶ,ದೇವರಾಜಪುರರವರು ತಮ್ಮ ಮನೆಗೆ ಐ.ಪಿ.ಲೈನ್ ಯಿಂದ ವಿದ್ಯುತ್ ಸಂಪರ್ಕವಿದ್ದು ಅದನ್ನು ನಿರಂತರ ಜ್ಯೋತಿಯಿಂದ ವಿದ್ಯುತ್ ಸಂಪರ್ಕ ನೀಡುವಂತೆ ಮನವಿ ಸಲ್ಲಿಸಿದರು.

ಸಭೆಯ ಅಧ್ಯಕ್ಷರು ಆಲೂರು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಯಾವುದೇ ರೀತಿಯ ಸ್ಥಳಿಯರಿಂದ ಅಕ್ಷೇಪಣೆ ಇಲ್ಲದಿದ್ದರೆ ನಿರಂತರ ಜ್ಯೋತಿಯಿಂದ ವಿದ್ಯುತ್ ಸಂಪರ್ಕಕೊಡಲು ಸ್ವಂತ ಕಾಮಗಾರಿ ಯೋಜನೆಯಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

4. ಶ್ರೀ ರವಿ ಬಿನ್ ರಾಜಕುಮಾರ ಉಮಾದೇವರಹಳ್ಳಿ ತಮ್ಮ ಜಮೀನ ಮಧ್ಯೆ ಇರುವ ಕಂಬಗಳನ್ನು ಸ್ಥಳಾಂತರಿಸಲು ಕೋರಿ ಮನವಿ ಮಾಡಿದರು.

ಸಭೆಯ ಅಧ್ಯಕ್ಷರು ಆಲೂರು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಸ್ವಯಂ ಕಾಮಗಾರಿಯಲ್ಲಿ ಅವರ ಜಮೀನಿನ ಪಕ್ಕದಲ್ಲಿ ಕಂಬಗಳ ಸ್ಥಳಾಂತರ ಮಾಡಲು ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಸಭೆಯ ಅಧ್ಯಕ್ಷರು ತುಂಬಾ ವರ್ಷಗಳಿಂದ ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿರುವ ಲೈನ್ ಮೆನ್ ಗಳ ಸ್ಥಳ ಬದಲಾವಣೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು ಮತ್ತು ಲೈನ್ ಮೆನ್ ಗಳು ಸಂಬಂಧಪಟ್ಟ ಕ್ಯಾಂಪ್ ಗಳಲ್ಲಿ ವಾಸವಾಗಿರಬೇಕು ಎಂದು ಮೌಖಿಕವಾಗಿ ಕಾರ್ಯನಿರ್ವಾಹಕ ಇಂಜಿನಿಯರ್ ರವರಿಗೆ ತಿಳಿಸಿದರು.

ಶ್ರೀ ಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ ನೌಕರರುಗಳನ್ನು ವಂಧಿಸುವ ಮೂಲಕ ಸಭೆಯನ್ನು, ಮಧ್ಯಾಹ್ನ **5 :30** ಮುಕ್ತಾಯಗೊಳಿಸಲಾಯಿತು

2/6

ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿ)
ಕಾ ಮತ್ತು ಪಾ ಉಪ-ವಿಭಾಗ,ಸೆಸ್ಕ್, ಆಲೂರು

ಪ್ರತಿಗಳನ್ನು ಗೌರವಪೂರ್ವಕವಾಗಿ.

1. ಅಧೀಕ್ಷಕ ಇಂಜಿನಿಯರ್(ವಿ). ಕಾ ಮತ್ತು ಪಾ ವೃತ್ತ,ಚಾ.ವಿ.ಸ.ನಿ.ನಿ., ಹಾಸನರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ). ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಸಕಲೇಶಪುರ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
3. ಲೆಕ್ಕಾಧಿಕಾರಿ ([redacted]),ಸಕಲೇಶಪುರ ವಿಭಾಗ
4. ಲೆಕ್ಕಾಧಿಕಾರಿ (ಆಂ.ಪ),ಸಕಲೇಶಪುರ ವಿಭಾಗ
5. ಕಚೇರಿ ಪ್ರತಿ.